ನಮ್ಮಲ್ಲಿ 100ರಲ್ಲಿ 17–18 ಮಕ್ಕಳ ಬಳಿ ಮೊಬೈಲ್ ಇದೆ ಎನ್ನುವುದು ಪೋಷಕರಿಗೇ ತಿಳಿದಿಲ್ಲ. ಅಂದರೆ ಪೋಷಕರ ಗಮನಕ್ಕೆ ಬಾರದೆಯೇ ಅವುಗಳನ್ನು ಅಷ್ಟು ಮಕ್ಕಳು ಬಳಸುತ್ತಿದ್ದಾರೆ.

ಪ್ರತಿಷ್ಠೆಯ ಹೆಸರಿನಲ್ಲಿ ನಾವು ಉಣಬಡಿಸುತ್ತಿರುವ ಶಿಕ್ಷಣದ ಅಡ್ಡಪರಿಣಾಮಗಳಿಗೂ ಕೆಲವು ಉದಾಹರಣೆಗಳಿವೆ. ಬೆಂಗಳೂರಿನ ಪ್ರತಿಷ್ಠಿತ ಶಾಲೆಯ ಹುಡುಗನೊಬ್ಬ ತಾಯಿಯ ಕಾರ್ಡ್ ಉಜ್ಜಿ 23 ಸಾವಿರ ರೂಪಾಯಿಯ ಕೈಗಡಿಯಾರವನ್ನು ಆನ್‌ಲೈನ್‌ನಲ್ಲಿ ಖರೀದಿಸಿದ್ದ. ತಾಯಿಯ ಮೊಬೈಲ್‌ಗೆ ಸಂದೇಶ ಬಂದಾಗಲೇ ತನ್ನ ಕಾರ್ಡ್ ಬಳಕೆಯಾಗಿದೆ ಎನ್ನುವುದು ಗೊತ್ತಾದದ್ದು. ಆ ಹುಡುಗ ಓದುತ್ತಿದ್ದ ಶಾಲೆಯಲ್ಲಿ ಸಹಪಾಠಿಗಳಲ್ಲಿ ಕೆಲವರು ಅಷ್ಟು ದುಬಾರಿ ವಸ್ತುಗಳ ಬಳಕೆಯನ್ನು ಸಹಜ ಎನ್ನುವಂತೆ ಮಾಡುತ್ತಿದ್ದರು. ಅವರು ಪ್ರವಾಸಕ್ಕೆ ವಿದೇಶಕ್ಕೆ ಹೋಗಿ ಬಂದದ್ದನ್ನು ಹಂಚಿಕೊಂಡರೆ, ಬೇರೆ ಮಕ್ಕಳೂ ಪೋಷಕರನ್ನು ವಿದೇಶ ಪ್ರವಾಸಕ್ಕಾಗಿ ಪೀಡಿಸಲಾರಂಭಿಸುತ್ತಾರೆ. ಇಂತಹ ಸಮಸ್ಯೆಗಳ ಕುರಿತು ಯಾರಾದರೂ ನನ್ನಲ್ಲಿಗೆ ಆಪ್ತ ಸಮಾಲೋಚನೆಗೆ ಬಂದರೆ, ಮಕ್ಕಳು ಕೊಳ್ಳುವ ವಸ್ತುಗಳ ಬಗೆಗೆ ಹಾಗೂ ಪ್ರವಾಸಕ್ಕೆ ಎಲ್ಲಿಗೆ ಹೋಗಿ ಬಂದರು ಎನ್ನುವ ಬಗೆಗೆ ಬೇರೆ ಮಕ್ಕಳಿಗೆ ತಿಳಿಸಬೇಡಿ ಎಂದೇ ಸಲಹೆ ನೀಡುತ್ತೇನೆ.

ನಿಮ್ಹಾನ್ಸ್‌ನಲ್ಲಿ 'ಸರ್ವಿಸ್ ಫಾರ್ ಹೆಲ್ತಿ ಯೂಸ್ ಆಫ್ ಟೆಕ್ನಾಲಜಿ' (SHUT) ಎನ್ನುವ ಘಟಕ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ಡಾ. ಮನೋಜ್‌ಕುಮಾರ್ ಶರ್ಮ ಎನ್ನುವ ವೈದ್ಯರು ಮೊಬೈಲ್ ಹಾಗೂ ತಂತ್ರಜ್ಞಾನ ಸಂಬಂಧಿ ಸಮಸ್ಯೆಗಳನ್ನು ಬಗೆಹರಿಸಲು ಸಲಹೆಗಳನ್ನು ನೀಡುತ್ತಾರೆ.

ಯಾವ ಶುಭ ಸಮಾರಂಭಗಳಿಗೆ ಹೋದರೂ ಮಕ್ಕಳು ಈಗ ಅಲ್ಲಿ ಇರುವ ಜನರೊಟ್ಟಿಗೆ ಮಾತನಾಡುವುದು ಕಡಿಮೆ. ಮೊಬೈಲ್‌ನಲ್ಲಿ ಮುಳುಗಿಹೋಗಿರುವವರೇ ಹೆಚ್ಚು.

ಅತಿ ಶೀಘ್ರವಾಗಿ ಹಣ ಮಾಡುವ ಹುನ್ನಾರವನ್ನು ಗೂಗಲ್, ಆ್ಯಪಲ್, ಅಮೆಜಾನ್ ತರಹದ ಕಂಪನಿಗಳು ಮೂಡಿಸುತ್ತಿವೆ. ಗ್ರಾಹಕರನ್ನು ಇಂತಹ ಕಂಪನಿಗಳು ಅಲೆಮಾರಿಗಳನ್ನಾಗಿಸುತ್ತಿವೆ. ಮನಸ್ಸು ಅಲೆಮಾರಿಯಾಗುವ ಪ್ರಕ್ರಿಯೆ ಇದು. ಮಕ್ಕಳು ಇವುಗಳ ಹುನ್ನಾರದ ಭಾಗವಾಗುತ್ತಿದ್ದರೂ ಎಷ್ಟೋ ಪೋಷಕರಿಗೆ ಅದರ ಅರಿವೇ ಇಲ್ಲ. ಸರ್ವಾಂಗ ಸುಂದರವಾಗಿ ಮಕ್ಕಳು ಬೆಳೆಯಬೇಕು. ನಂದಿಬೆಟ್ಟದಲ್ಲಿಯೇ ಕುಳಿತಿರುತ್ತಾರೆ. ಲಾಲ್‌ಬಾಗ್ ಅಥವಾ ಹನುಮಂತನಗುಡ್ಡದಲ್ಲಿ ಅಂತಹವರ ಬದುಕು ಅಂತ್ಯಗೊಳ್ಳುತ್ತದೆ. ಇದನ್ನು ಒಂದು ರೂಪಕದಂತೆ ನಾವು ಓದಿಕೊಳ್ಳಬೇಕು. ಗೇಮಿಂಗ್ ಆ್ಯಪ್‌ಗಳು ಹಾಗೂ ವೆಬ್‌ಸೈಟ್‌ಗಳು ಸೃಷ್ಟಿಸುತ್ತಿರುವ ಮನಃಸ್ಥಿತಿ ಇಂಥದ್ದು. 1200 ಕೋಟಿ ರೂಪಾಯಿಯಷ್ಟು ವಹಿವಾಟನ್ನು ಆನ್‌ಲೈನ್ ವಿಡಿಯೊ ಗೇಮಿಂಗ್ ಭಾರತದಲ್ಲಿ 2023ರ ಹೊತ್ತಿಗೆ ನಡೆಸಲಿದೆ ಎನ್ನುವ ಒಂದು ಅಂದಾಜಿದೆ. ನಾಲ್ಕು ವರ್ಷಗಳ ಹಿಂದೆ ಈ ವಹಿವಾಟು ಮೂರನೇ ಒಂದರಷ್ಟು ಮಾತ್ರ ಇತ್ತೆನ್ನುವುದು ಇದು ಬೆಳೆಯುತ್ತಿರುವ ವೇಗಕ್ಕೆ ಕನ್ನಡಿ ಹಿಡಿಯುತ್ತದೆ.

ವಿಡಿಯೊ ಗೇಮಿಂಗ್‌ಗೆ ಸಂಬಂಧಿಸಿದ ಆಟಗಾರರನ್ನು ವ್ಯವಸ್ಥಿತವಾಗಿ ತಯಾರು ಮಾಡುವ ತರಬೇತಿಯನ್ನು ಅಮೆರಿಕ ಮತ್ತು ಯೂರೋಪ್ ದೇಶಗಳಲ್ಲಿ ನೀಡಲಾಗುತ್ತಿದೆ. ಕೆಲವು ಚಾಂಪಿಯನ್‌ಷಿಪ್‌ಗಳು ಅಲ್ಲಿ ನಡೆಯುತ್ತವೆ. ದೈಹಿಕ ವ್ಯಾಯಾಮವೂ ಸೇರಿ ಕೆಲವು ಬಗೆಯ ತರಬೇತಿಯನ್ನು ಅವರಿಗೆ ನೀಡುತ್ತಾರೆ. 9ರಿಂದ 12 ತಾಸಿನ ತರಬೇತಿ ಅದು. ವಿಡಿಯೊ





ಗೇಮ್‌ಗಳಿಗಾಗಿ ಇಷ್ಟೆಲ್ಲ ತಯಾರಾಗುವ ಯುವಕ–ಯುವತಿಯರು ಆಯಾ ದೇಶಗಳಲ್ಲಿ ನಡೆಯುವ ದೊಡ್ಡ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳನ್ನೇ ಪಾಸು ಮಾಡುವಷ್ಟು ಬುದ್ಧಿಯನ್ನು ಬಳಸುತ್ತಾರೆನ್ನುವುದು ಆಸಕ್ತಿಕರ.

ವಿಡಿಯೊ ಗೇಮಿಂಗ್‌ನಿಂದ ತುಸು ಆಚೆಗೆ ಬಂದು, ಯೋಗದ ವಿಷಯವನ್ನು ನೋಡೋಣ. 'ಯೋಗ ಚಾಂಪಿಯನ್‌ಷಿಪ್' ಅನ್ನು ಕೂಡ ಈಗ ಕೆಲವರು ಆಯೋಜಿಸುತ್ತಾರೆ. ಯೋಗ ಎನ್ನುವುದು ತೀರಾ ವೈಯಕ್ತಿಕ. ಕೆಲವು ಆಸನಗಳನ್ನು ಹಾಕುವುದನ್ನು ಮಾತ್ರ ವ್ಯಾಯಾಮ ಎಂದು ಪರಿಗಣಿಸಬಹುದು. ಆದರೆ ಒಟ್ಟಾರೆ ಯೋಗದ ಪರಿಕಲ್ಪನೆ ಅಷ್ಟಕ್ಕೇ ಸೀಮಿತವಲ್ಲ. ಅದು ಮನಸ್ಸನ್ನು ಕೇಂದ್ರೀಕರಿಸುವ, ಧ್ಯಾನಸ್ಥ ಸ್ಥಿತಿಯನ್ನು ಅಭ್ಯಾಸ ಮಾಡಿಕೊಳ್ಳುವ ಸ್ಥಿತಿಯನ್ನು ಸೂಚಿಸುತ್ತದೆ. 'ಯೋಗ' ಎನ್ನುವ ಪದದ ಅರ್ಥ ವಿಸ್ತಾರವನ್ನು ಇನ್ನೂ ತಲಸ್ಪರ್ಶಿಯಾಗಿ ವ್ಯಾಖ್ಯಾನಿಸಬಹುದು. ಅದನ್ನು ಒಂದು ಚಾಂಪಿಯನ್‌ಷಿಪ್‌ಗೆ ಸೀಮಿತಗೊಳಿಸುವುದು ಮಾರುಕಟ್ಟೆಯ ಹುನ್ನಾರವೇ ಸರಿ.

